**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳಾದ ಶ್ರೀ ಪ್ರದೀಪ ಶೆಟ್ಟರ ಮತ್ತು ಶ್ರೀ ಐವನ್ ಡಿ'ಸೋಜಾ ರವರುಗಳ ಶೂನ್ಯ ವೇಳೆಯ ಸೂಚನೆಗೆ ಉತ್ತರ**

**ವಿಷಯ:**

2024-25ನೇ ಸಾಲಿನ ಪ್ರಾಥಮಿಕ ಮತ್ತು ಪ್ರೌಢ ಶಾಲೆಯ ಶಿಕ್ಷಕರ ವರ್ಗಾವಣೆ ಕಾರಣಾಂತರಗಳಿಂದ 5 ಬಾರಿ ಮುಂದೂಡಲ್ಪಟ್ಟು, ನವೆಂಬರ ತಿಂಗಳಿನ ಮೊದಲನೆ ವಾರದಲ್ಲಿ ನಡೆದ ಕೌನ್ಸಲಿಂಗ್‌ನಲ್ಲಿ ಹಲವಾರು ಶಿಕ್ಷಕರು ಸ್ಥಳ ಆಯ್ಕೆ ಮಾಡಿಕೊಂಡಿರುತ್ತಾರೆ. ತುಮಕೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ಶಿಕ್ಷಕರು ಬಿಡುಗಡೆ ಆದೇಶ ಪಡೆದು ವರ್ಗಾವಣೆಗೊಂಡ ಸ್ಥಳಕ್ಕೆ ಹಾಜರಾಗಿರುತ್ತಾರೆ. ಈ ನಡುವೆ ಮಾನ್ಯ ಆಯುಕ್ತರು ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಈಗಾಗಲೇ ಬಿಡುಗಡೆ ಹೊಂದಿದವರನ್ನು, ಪರಸ್ಪರ ವರ್ಗಾವಣೆ ಹೊಂದಿದವರನ್ನು ಬಿಟ್ಟು ಮಿಕ್ಕೆಲ್ಲ ಕೌನ್ಸಲಿಂಗ್‌ನಲ್ಲಿ ಸ್ಥಳ ಆಯ್ಕೆ ಮಾಡಿಕೊಂಡ ಶಿಕ್ಷಕರನ್ನು ಈ ಶೈಕ್ಷಣಿಕ ವರ್ಷದ ಅಂತ್ಯಕ್ಕೆ ಅಂದರೆ 09.04.2016ಕ್ಕೆ ಬಿಡುಗಡೆಗೊಳಿಸಲು ತಿಳಿಸಿರುತ್ತಾರೆ. ಇದೇ ಕಾರಣಕ್ಕೆ ಕೆಲವರು ಬಿಡುಗಡೆ ಆದೇಶ ಪತ್ರವಿದ್ದರೂ ಬಿಡುಗಡೆ ಹೊಂದದೆ ಮೂಲ ಶಾಲೆಯಲ್ಲಿಯೇ ಮುಂದುವರೆಯುತ್ತಿದ್ದಾರೆ. ಅಲ್ಲದೇ ರಾಜ್ಯದ ಬೇರೆ ಜಿಲ್ಲೆಯ ಹೆಚ್ಚಿನವರು ಬಿಡುಗಡೆಯ ಆದೇಶದ ಪ್ರತಿಯೇ ಸಿಗದೇ ಮೂಲ ಶಾಲೆಯಲ್ಲಿಯೇ ಮಾನಸಿಕ ಹಿಂಸೆ ಅನುಭವಿಸುತ್ತಾ ಕಾರ್ಯನಿರ್ವಹಿಸುತ್ತಿದ್ದಾರೆ.

ಹಿಂದಿನ ಯಾವುದೇ ವರ್ಗಾವಣೆಯ ಸಂದರ್ಭದಲ್ಲಿ ಈ ರೀತಿಯಾಗಿ ಶೈಕ್ಷಣಿಕ ವರ್ಷ ಮುಗಿಯುವವರೆಗೂ ಮುಂದೂಡಲಟ್ಟು ವಿಳಂಬವಾಗಿರುವುದಿಲ್ಲ. ಮುಂದಿನ ದಿನಗಳಲ್ಲಿ ಕೇಂದ್ರ ಸರಕಾರದ ಜನಗಣತಿ ಪ್ರಾರಂಭವಾಗುತ್ತಿರುವುದರಿಂದ ಮತ್ತು ರಾಜ್ಯದಲ್ಲಿ ಸ್ಥಳಿಯ ಸಂಸ್ಥೆಗಳ ಚುನಾವಣೆ ಬರುವದರಿಂದ ನೀತಿ ಸಂಹಿತೆ ಜಾರಿಯಾದರೆ ವರ್ಗಾವಣೆಗೊಂಡ ಶಿಕ್ಷಕರಿಗೆ ತೊಂದರೆಯಾಗುವ ಸಂಭವವಿದೆ. ಹೀಗಾಗಿ ಶಿಕ್ಷಕರಿಗೆ ಬಿಡುಗಡೆಯ ಭಾಗ್ಯ ದೊರೆಯದೇ ಅದೇ ಶಾಲೆಯಲ್ಲಿ ಮುಂದುವರೆಯುವ ಆಂತಕದಲ್ಲಿ ಕಾಲ ತಳ್ಳುತಿದ್ದಾರೆ. ಶಾಲಾ ಶೈಕ್ಷಣಿಕ ಕಾರ್ಯಗಳಲ್ಲಿ ಮನಪೂರ್ವಕ ತೊಡಗಿಸಿಕೊಳ್ಳುವುದು ಸಾಧವಾಗುತ್ತಿಲ್ಲ. ಸರಕಾರ ತೋರಿಸಿದ ಖಾಲಿ ಹುದ್ದೆಗಳನ್ನು ಶಿಕ್ಷಕರು ಆಯ್ಕೆ ಮಾಡಿಕೊಂಡಿರುವುದರಿಂದ ಯಾವುದೇ ತೊಂದರೆಯಾಗುವುದಿಲ್ಲ.

ಹಾಗಾಗಿ ಮಾನ್ಯ ಸಭಾಪತಿಗಳೆ ವರ್ಗಾವಣೆಗೊಂಡು ಬಿಡುಗಡೆಯ ನಿರೀಕ್ಷೆಯಲ್ಲಿರುವ ಶಿಕ್ಷಕರಿಗೆ ಆದಷ್ಟು ಬೇಗನೆ ವರ್ಗಾವಣೆ ಪ್ರತಿಯನ್ನು ನೀಡಿ ಕರ್ತವ್ಯದಿಂದ ಬಿಡುಗೆಗೊಳಿಸಲು ಆದೇಶ ಮಾಡುವಂತೆ ಈ ಮೂಲಕ ಸಂಬಂಧಪಟ್ಟ ಸಚಿವರಿಗೆ ಒತ್ತಾಯಿಸುತ್ತೇನೆ.

*****

**ಉತ್ತರ:**

2024-25ನೇ ಸಾಲಿನಲ್ಲಿ ಶಿಕ್ಷಕರ ವರ್ಗಾವಣೆ ಕೌನ್ಸಿಲಿಂಗ್ ಪ್ರಕ್ರಿಯೆಯು ವಿವಿಧ ಕಾರಣಗಳಿಂದಾಗಿ 5 ಬಾರಿ ಮುಂದೂಡಲ್ಪಟ್ಟಿದ್ದು ಅಂತಿಮವಾಗಿ ಪರಿಷ್ಕೃತ ವೇಳಾಪಟ್ಟಿ 5 ರ ಪ್ರಕಾರ ಎಲ್ಲಾ ವಿಧದ ವರ್ಗಾವಣೆ ಕೌನ್ಸಿಲಿಂಗ್ ಪ್ರಕ್ರಿಯೆಗಳು ದಿನಾಂಕ: 06/12/2025 ರಂದು ಮುಕ್ತಾಯವಾಗಿರುತ್ತದೆ.

...2

ರಾಜ್ಯದಲ್ಲಿ ಹೆಚ್ಚುವರಿ ಮತ್ತು ಶಿಕ್ಷಕರ ಸಮರ್ಪಕ ಮರುಹೊಂದಾಣಿಕೆ ಪ್ರಕ್ರಿಯೆಯಲ್ಲಿ ಕೌನ್ಸಿಲಿಂಗ್ ಮೂಲಕ ಸ್ಥಳ ಆಯ್ಕೆ ಮಾಡಿಕೊಂಡ ಶಿಕ್ಷಕರುಗಳನ್ನು ಮತ್ತು ನಿರ್ದಿಷ್ಟಪಡಿಸಿದ ಹುದ್ದೆಗಳಲ್ಲಿ ಗರಿಷ್ಠ 5 ವರ್ಷ ಸೇವೆ ಪೂರೈಸಿದ ಶಿಕ್ಷಕರು ಕೌನ್ಸಿಲಿಂಗ್ ಮೂಲಕ ಸ್ಥಳ ಆಯ್ಕೆ ಮಾಡಿಕೊಂಡಿರುವ ಹಾಗೂ ಪರಸ್ಪರ ವರ್ಗಾವಣೆಯಲ್ಲಿ ವರ್ಗಾವಣೆ ಪಡೆದ ಶಿಕ್ಷಕರುಗಳನ್ನು ಜಿಲ್ಲಾ ಹಂತದಲ್ಲಿ ವರ್ಗಾವಣೆ ಪಡೆದ ಶಾಲೆಯ ಕರ್ತವ್ಯಕ್ಕೆ ಹಾಜರುಪಡಿಸಲಾಗಿರುತ್ತದೆ. ಬಹುತೇಕ ಶಿಕ್ಷಕರು ಕೋರಿಕೆ ವರ್ಗಾವಣೆಯಲ್ಲಿ ಸ್ಥಳ ಆಯ್ಕೆ ಮಾಡಿಕೊಂಡಿರುತ್ತಾರೆ. ಈಗಾಗಲೇ ಸಾಮಾಜಿಕ ಹಾಗೂ ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಕಾರ್ಯಕ್ಕೆ ಶಿಕ್ಷಕರುಗಳನ್ನು ನಿಯೋಜಿಸಲಾಗಿದ್ದರಿಂದ ಶಾಲೆಗಳಲ್ಲಿ ಪಾಠ ಬೋಧನೆ ಕುಂಠಿತವಾಗಿರುತ್ತದೆ. ವಾರ್ಷಿಕ ಪಾಠ ಹಂಚಿಕೆ ವೇಳಾಪಟ್ಟಿಯ ಪ್ರಕಾರ ಡಿಸೆಂಬರ್ 3ನೇ ವಾರದಲ್ಲಿ ನಿಗದಿತ ಅವಧಿಯೊಳಗೆ ಪಠ್ಯ ಕ್ರಮವನ್ನು ಶಿಕ್ಷಕರುಗಳು ಕಡ್ಡಾಯವಾಗಿ ಮುಕ್ತಾಯಗೊಳಿಸಬೇಕಾಗುತ್ತದೆ.

ಮುಂದುವರೆದು, ಪಾಠ ಆಧಾರಿತ ಮೌಲ್ಯಮಾಪನ ಕಾರ್ಯವಿಧಾನದಲ್ಲಿ ಪ್ರತಿ ಪಾಠ ಮುಕ್ತಾಯವಾದ ನಂತರ ಆಯಾ ಘಟಕಕ್ಕೆ ಸಂಬಂಧಿಸಿದ ಕಲಿಕೆ ಫಲಗಳ ಆಧಾರದ ಮೇಲೆ ಮಕ್ಕಳಿಗೆ ಘಟಕ ಪರೀಕ್ಷೆ ಮಾಡಿ, ಸ್ಯಾಟ್ಸ್ ತಂತ್ರಾಂಶದಲ್ಲಿ ಅಂಕಗಳನ್ನು ನಮೂದಿಸುವುದು ಕಡ್ಡಾಯವಾಗಿರುತ್ತದೆ. ಡಿಸೆಂಬರ್ ಮಾಹೆಯಲ್ಲಿ ಪಠ್ಯ ಪೂರಕ ಚಟುವಟಿಕೆಗಳನ್ನು ನಡೆಸಬೇಕಾಗುತ್ತದೆ. ನಂತರ ಫೆಬ್ರವರಿ ಮಾಹೆಯ ಅಂತ್ಯದೊಳಗೆ ಶಿಕ್ಷಕರುಗಳು ನಿಗದಿತ ಪಠ್ಯ ಕ್ರಮದ ಪ್ರಕಾರ ವೇಳಾಪಟ್ಟಿಯಂತೆ ಪಾಠಗಳನ್ನು ಪೂರ್ಣಗೊಳಿಸಬೇಕಾಗುತ್ತದೆ. ಫೆಬ್ರವರಿ ಮಾಹೆಯ ನಾಲ್ಕನೇ ವಾರದಲ್ಲಿ ರೂಪಣಾತ್ಮಕ ಮೌಲ್ಯಮಾಪನ-4ನ್ನು ಪೂರ್ಣಗೊಳಿಸಬೇಕಾಗಿರುತ್ತದೆ. ಮಾರ್ಚ್ ಮೊದಲನೇ ವಾರದಲ್ಲಿ ಮಕ್ಕಳಿಗೆ ಪಾಠಗಳ ಪುನರಾವರ್ತನೆ ಮಾಡಿ ಮಾರ್ಚ್ ಎರಡನೇ / ಮೂರನೇ ವಾರದಲ್ಲಿ ಮಕಳಿಗೆ ವಾರ್ಷಿಕ ಪರೀಕ್ಷೆಗಳನ್ನು (ಸಂಕಲನಾತ್ಮಕ ಮೌಲ್ಯಮಾಪನ-2) ನಡೆಸಿ ಅಂಕಗಳನ್ನು / ಗ್ರೇಡ್ ಗಳನ್ನು ಕ್ರೋಢೀಕೃತ ಅಂಕವಹಿ ಮತ್ತು ಆನ್‌ಲೈನ್ ತಂತ್ರಾಂಶದಲ್ಲಿ ಕಡ್ಡಾಯವಾಗಿ ಇಂದೀಕರಣ ಮಾಡಬೇಕಾಗುತ್ತದೆ. ಏಪ್ರಿಲ್ ಮಾಹೆಯಲ್ಲಿ ಸಮುದಾಯದತ್ತ ಶಾಲೆ ಹಾಗೂ ಫಲಿತಾಂಶ ಪ್ರಕಟಣೆ ಹಾಗೂ ಪ್ರಸಕ್ತ ಸಾಲಿನ ಎಲ್ಲಾ ಶೈಕ್ಷಣಿಕ ಕಾರ್ಯ ಚಟುವಟಿಕೆಗಳು ಏಪ್ರಿಲ್-10 ರಂದು ಮುಕ್ತಾಯಗೊಳಿಸಬೇಕಾಗುತ್ತದೆ.

ವರ್ಗಾವಣೆ ಪಡೆದ ಶಿಕ್ಷಕರು ಮೂಲ ಶಾಲೆಯಲ್ಲಿ ಮೇಲೆ ವಿವರಿಸಿದ ಎಲ್ಲಾ ಶೈಕ್ಷಣಿಕ ಕಾರ್ಯ ಚಟುವಟಿಕೆಗಳನ್ನು ಪೂರ್ಣಗೊಳಿಸಬೇಕಾಗುತ್ತದೆ. ಆದ್ದರಿಂದ ಶೈಕ್ಷಣಿಕ / ಆಡಳಿತಾತ್ಮಕ / ಮಕ್ಕಳ ಕಲಿಕಾ ಗುಣಮಟ್ಟವನ್ನು ಕಾಯ್ದುಕೊಳ್ಳಲು ಅನುವಾಗುವಂತೆ ವರ್ಗಾವಣೆ ಪಡೆದ ಶಿಕ್ಷಕರುಗಳನ್ನು ದಿನಾಂಕ: 09.04.2026 ರಂದು ಮೂಲ ಶಾಲೆಯಿಂದ ಬಿಡುಗಡೆಗೊಳಿಸಿ, ದಿನಾಂಕ: 10.04.2026 ರಂದು ವರ್ಗಾವಣೆ ಹೊಂದಿರುವ ಶಾಲೆಯಲ್ಲಿ ಕರ್ತವ್ಯಕ್ಕೆ ಹಾಜರಾಗಲು ದಿನಾಂಕ: 11.11.2025 ರಂದು ಸುತೋಲೆಯನ್ನು ಹೊರಡಿಸಲಾಗಿದೆ. ಈ ಸುತ್ತೋಲೆಯ ಪ್ರಕಾರ ರಾಜ್ಯಾದ್ಯಂತ ಏಕಕಾಲದಲ್ಲಿ ವರ್ಗಾವಣೆಯಾದ ಶಿಕ್ಷಕರ ಬಿಡುಗಡೆ ಮತ್ತು ಸೇರ್ಪಡೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುತ್ತದೆ.

...3

ತುಮಕೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಲವು ಶಿಕ್ಷಕರುಗಳು ಇಲಾಖೆಯಿಂದ ಸುತ್ತೋಲೆ ಹೊರಡಿಸುವ ಮುನ್ನ ಅಂದರೆ ದಿನಾಂಕ: 11.11.2025 ಕ್ಕೆ ಮೊದಲು ಜಿಲ್ಲೆಯ ಒಳಗೆ ವರ್ಗಾವಣೆ ಹೊಂದಿದ ಶಾಲೆಯ ಕರ್ತವ್ಯಕ್ಕೆ ಹಾಜರಾಗಿರುತ್ತಾರೆ. ಉಳಿದಂತೆ ಯಾವುದೇ ಶಿಕ್ಷಕರು ವರ್ಗಾಯಿತ ಶಾಲೆಯಲ್ಲಿ ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲ. ದಿನಾಂಕ: 11.11.2025 ರ ನಂತರ ವಿಭಾಗದ ಒಳಗೆ ಮತ್ತು ವಿಭಾಗದ ಹೊರಗೆ ಕೋರಿಕೆ ವರ್ಗಾವಣೆ ಪಡೆದ ಯಾವುದೇ ಶಿಕ್ಷಕರನ್ನು ಬಿಡುಗಡೆಗೊಳಿಸಲಾಗಿರುವುದಿಲ್ಲ. ಇದು ಶಾಲೆಯಲ್ಲಿ ಮಕ್ಕಳ ಕಲಿಕಾ ಚಟುವಟಿಕೆಗಳಿಗೆ ಯಾವುದೇ ಅಡಚಣೆಯಾಗದಂತೆ ಶೈಕ್ಷಣಿಕ ಹಿತದಷಿಯಿಂದ ಕೈಗೊಳ್ಳಲಾಗಿರುವ ನಿರ್ಣಯವಾಗಿರುತ್ತದೆ. ಇದರಿಂದ ಶಿಕ್ಷಕರ ವರ್ಗಾವಣೆ ಆದೇಶದಲ್ಲಿ ಯಾವುದೇ ಬದಲಾವಣೆ ಆಗುವುದಿಲ್ಲ ಮತ್ತು ಇಲಾಖೆಯ ನಿರ್ಣಯದಿಂದ ಶಿಕ್ಷಕರ ವರ್ಗಾವಣೆ ಹಕ್ಕಿಗೆ ಯಾವುದೇ ದಕ್ಕೆಯಾಗುವುದಿಲ್ಲ.

**ಸಂಖ್ಯೆ: ಇಪಿ 176 ಪಿಎಂಎ 2025**

**(ಎಸ್.ಮಧು ಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು